ಕೂತ್ಕೊಳ್ಳಿ...’ ಎಂದು ಮತ್ತೆ ಎದುರಿನ ಚೇರು ತೋರಿಸಿದರು. ನಾನು ಅಳುಕುತ್ತ ಅಳುಕುತ್ತಲೇ ಅದರ ತುದಿಯಲ್ಲಿ ಕುಳಿತೆ.

‘ಜಾಲಿ ಮೈದಾನದಲ್ಲಿ ಒಂದು ಹುಡುಗಿ ಕೊಲೆಯಾಗಿರೋದು ಗೊತ್ತಾ?...’ ಎಂದರು. ಇಲ್ಲ ಸಾರ್, ನಾನ್ ಮಾಡಿಲ್ಲ... ಎಂದನ್ನಬೇಕೆಂದೆನ್ನಿಸಿದರೂ ಮುಂದೇನು ಹೇಳುವರೋ ಎಂದು ಇನ್ನಷ್ಟು ಕುರ್ಚಿಯ ತುದಿಗೆ ಕುಳಿತೆ. ‘ಆ ಕೊಲೆಗಾರನ ಚಿತ್ರ ಬರೆದುಕೊಡಬೇಕು’ ಎಂದರು ಕೂಲಾಗಿ. ‘ಸರ್...’ ಎಂದು ತೊದಲಿದೆನಾದರೂ ನನ್ನ ಗಂಟಲಿಂದ ಸ್ವರ ಹೊರಬರಲಿಲ್ಲ. ‘ಹಿಂದೆ ನೀವು ನಮ್ಮ ಇಲಾಖೆಗೆ ತುಂಬಾ ಸಹಕಾರ ನೀಡಿದ್ದೀರಿ ಅಂತ ಕೇಳಲ್ಪಟ್ಟೆ. ಅದಕ್ಕೇ, ನೀವೇ ಸೂಕ್ತ ವ್ಯಕ್ತಿ ಅಂತ ನಿಮ್ಮನ್ನೆ ಆಯ್ಕೆ ಮಾಡಿಕೊಂಡಿದ್ದೀನಿ...’ ಎಂದು ಉತ್ತರ ಭಾರತದ ಆಕ್ಸೆಂಟಲ್ಲಿ ಕನ್ನಡ ಉಚ್ಚಾರಣೆ ಮಾಡುತ್ತಿದ್ದರೂ ಚೆನ್ನಾಗಿ ಕನ್ನಡ ಕಲಿತವರಂತೆಯೇ ಮಾತಾಡುತ್ತಿದ್ದುದು ಅವರ ಬಗೆಗಿನ ಗೌರವ ಅಧಿಕವಾಗಲು ಕಾರಣವಾಯಿತು.

ಹಿಂದೆ ಅನೇಕ ಸಲ ಪೊಲೀಸ್ ಇಲಾಖೆಗೆ ಸಹಕರಿಸಿದ್ದಿದೆ. ಒಮ್ಮೆ, ವಿದ್ಯಾನಗರದಲ್ಲಿ ಪ್ರೊಫೆಸರ್ ಒಬ್ಬರ ಮನೆಯ ಕಿಟಕಿ ಸರಳುಗಳ ಮಧ್ಯೆ ಕಾರಿನ ಜಾಕ್ ಸಿಗಿಸಿ, ಮನುಷ್ಯನೊಬ್ಬ ಸಲೀಸಾಗಿ ನುಗ್ಗುವಷ್ಟು ಅಗಲ ಕಂಬಿಗಳನ್ನು ಹಿಗ್ಗಲಿಸಿ ಸದ್ದಿಲ್ಲದಂತೆ ಬೆಲೆಬಾಳುವ ವಸ್ತುಗಳನ್ನು ಅಪಹರಿಸಿದ್ದರು. ಆಗಿನ ಇನ್‌ಸ್ಪೆಕ್ಟರ್ ಅಶೋಕ್ ಸದಲಗಿ ಅವರ ಕೋರಿಕೆಯಂತೆ, ಆ ಮನೆಯವರಿಂದ ಕಳ್ಳರ ಚರ್ಯೆಯನ್ನು ಕೇಳಿ, ಪೊಲೀಸರಿಂದ ಅವರ ಬೆರಳಚ್ಚು ಗುರುತುಗಳನ್ನು ತಿಳಿದುಕೊಂಡು ಅವರುಗಳ ಮುಖದ ರೇಖಾಚಿತ್ರ ಬರೆದುಕೊಟ್ಟಿದ್ದೆ. ಅದನ್ನು ಸ್ಥಳೀಯ ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಎರಡೇ ದಿನಗಳಲ್ಲಿ ಅವರನ್ನು ಗುರುತಿಸಿ ಹಿಡಿಯುವಲ್ಲಿ ಯಶಸ್ವಿಯೂ ಆಗಿದ್ದರು. ನಂತರ ನನ್ನನ್ನು ಠಾಣೆಗೆ ಕರೆಸಿ ಕಳ್ಳರನ್ನೂ ತೋರಿಸಿದ್ದರು. ನನ್ನ ಗೆರೆಗಳನ್ನು ನನಗೇ ನಂಬಲು ಸಾಧ್ಯವಾಗಿರಲಿಲ್ಲ. ತದ್ರೂಪು ಆ ರೇಖಾಚಿತ್ರಗಳೇ ಎದ್ದು ಜೀವಂತ ರೂಪ ಪಡೆದವರಂತೆ ಚಡ್ಡಿ ಹಾಕಿ ಕಂಬಿಗಳ ಹಿಂದೆ ನಿಂತುಕೊಂಡಿದ್ದರು! ಅವರೋ, ಈಗಲೇ ನನ್ನನ್ನು ನುಂಗಿಬಿಡುವವರಂತೆ ಕೆಂಗಣ್ಣು ಗುಡ್ಡೆಗಳನ್ನು ಆ ಕಡೆಗೂ ಈ ಕಡೆಗೂ ಆಡಿಸಿ ಭಯ ಹುಟ್ಟಿಸುತ್ತಿದ್ದರು. ಇನ್ನಾವತ್ತೂ ಇಂಥ ಕೆಲಸ ಮಾಡಬಾರದು ಅಂತ ಅನ್ನಿಸಿದರೂ ಪೊಲೀಸರು ನನ್ನನ್ನು ಬಿಡುತ್ತಿರಲಿಲ್ಲ.

ಇನ್ನೊಮ್ಮೆ, ಸೀಗೇಹಳ್ಳದ ಕೋಡಿಯ ಸದುವಿನಲ್ಲಿ ಎತ್ತಿನ ಗಾಡಿಯಲ್ಲಿ ಹೋಗುತ್ತಿದ್ದವರನ್ನು ತಡೆಹಾಕಿ, ಅವರಲ್ಲಿದ್ದ ನಗನಾಣ್ಯ ಮಾಂಗಲ್ಯಾದಿಯಾಗಿ ದೋಚಿದ್ದಲ್ಲದೇ ಮನೆಮಂದಿಯನ್ನೆಲ್ಲ ಕೊಲ್ಲುವ ಪ್ರಯತ್ನ ಮಾಡಿದ್ದರು. ಆಗ ಡ್ಯೂಟಿ ಮೇಲಿದ್ದ ರೂರಲ್ ಪೊಲೀಸ್ ಸ್ಟೇಷನ್‌ನ ಸಬ್ ಇನ್ಸ್‌ಪೆಕ್ಟರ್ ಅವಿನಾಶ್, ದರ್ಪದಿಂದ, ಆ ದರೋಡೆಕೋರರ ಚಿತ್ರಗಳನ್ನೆಲ್ಲ ಬರೆದುಕೊಡುವಂತೆ ತಾಕೀತು ಮಾಡಿದ್ದರು. ‘ನಾನು ಹೀಗೆ ಚಿತ್ರ ಬರೆದುಕೊಡ್ತೀನಿ ಅಂತ ಯಾರು ಹೇಳಿದ್ದು ನಿಮಗೆ? ನಾನು ಫ್ರೀಲಾನ್ಸ್ ಕಲಾವಿದ. ನಿಮ್ಮಂಥವರ ಪೊಳ್ಳು ಬೆದರಿಕೆಗೆಲ್ಲ ಬಗ್ಗುವವನಲ್ಲ...’ ಎಂದು ಕಲಾವಿದನ ಸ್ವಾಭಿಮಾನ ಮೆರೆದಿದ್ದೆ. ಆದರೆ ನನ್ನ ಪರಿಚಿತ ಹೆಡ್ ಕಾನ್‌ಸ್ಟೆಬಲ್, ತಮ್ಮ ಮರ್ಯಾದೆ ಕಾಪಾಡುವಂತೆ ಅಂಗಲಾಚಿದ್ದರಿಂದ ಒಪ್ಪಿ ಐ ವಿಟ್ನೆಸ್‌ಗಳ ಸಾಕ್ಷಿ ಆಧರಿಸಿ ಅವರ ಕೈ, ಕಿವಿ, ಮೂಗು, ಬಾಯಿಗಳ ವಿವರ ಪಡೆದು ಅಳೆದು, ಸುರಿದು ಅವರ ಕಣ್ಣೆದುರೇ ಬರೆದು ತೋರಿಸಿ ಇವರೇ ಅವರೆಂದು ಖಡಕ್ಕಾಗಿ ಅವರು ಗುರುತಿಸಿದ ಮೇಲೆ ಪೊಲೀಸರಿಗೆ ಕೊಟ್ಟಿದ್ದೆ.

ಇನ್ನೆಷ್ಟೋ ಸಲ ಸಾಕ್ಷಿಗಳು ಒಮ್ಮೆ ಆ ದುರುಳರ ಮುಖಚರ್ಯೆಯನ್ನು ನೋಡಿದ್ದರೂ, ಅವರನ್ನೇ ತಂದು ಎದುರು ನಿಲ್ಲಿಸಿದರೂ ಆಘಾತಗೊಂಡಿದ್ದರಿಂದ ಗಲಿಬಿಲಿಗೊಂಡು ಗುರುತಿಸುವಲ್ಲಿ ವಿಫಲರಾಗುತ್ತಿದ್ದರು. ಅವಾಗಲೂ ಅವರು ನನ್ನ ಮೇಲೆ ಅವಲಂಬಿತರಾಗುತ್ತಿದ್ದರು. ಆಗೆಲ್ಲ ನನ್ನ ಕೈಚಳಕ ತೋರಿಸಿಯೇ ಕಳ್ಳರನ್ನು ಹಿಡಿಯಬೇಕಾಗುತ್ತಿತ್ತು. ಹೀಗೆ ಪತ್ರಿಕೆಗಳಲ್ಲಿ ನಾನು ಬರೆದ ರೇಖಾಚಿತ್ರಗಳನ್ನೂ, ಆನಂತರದಲ್ಲಿ ಸಿಕ್ಕ ಕಳ್ಳರ ಭಾವಚಿತ್ರಗಳನ್ನೂ ತುಲನೆ ಮಾಡಿದ ಅನೇಕರು, ನನಗೆ ಕಳ್ಳರ ಪರಿಚಯವಿರುವುದರಿಂದಲೇ ಹೀಗೆ ಬರೆಯಲು ಸಾಧ್ಯ ಎಂದೂ, ನಾನೂ ಆ ಕಳ್ಳರ ಗ್ಯಾಂಗಿನವನೇ ಇರಬೇಕೆಂದೂ ಆಪಾದನೆ ಮಾಡುತ್ತಿದ್ದರು. ಆಮೇಲಾಮೇಲೆ ನಾನು ಕಂಪ್ಯೂಟರಿಗೆ ಅಪ್‌ಗ್ರೇಡ್ ಆಗಲಾರಂಭಿಸಿದ್ದರಿಂದ, ಬೋರ್ಡು, ಚಿತ್ರ ಬರೆಯುವುದರಿಂದ ಹೊಟ್ಟೆ ತುಂಬುವುದಿಲ್ಲವೆಂದು ಖಾತ್ರಿಯಾದ ನಂತರ ಸ್ಟುಡಿಯೊವನ್ನು ತೆರೆದು, ನನ್ನದೇ ವಿಶಿಷ್ಟ ಕಣ್ಣಿನಿಂದ ಫೋಟೊ ತೆಗೆಯಲು ಶುರುಮಾಡಿದೆ. ಎಲ್ಲರೂ ಮುಖದ ಮೇಲೆ ಬೆಳಕು ಬಿಟ್ಟು ಫೋಟೊ ತೆಗೆಯುತ್ತಿದ್ದರೆ, ನಾನು ಅವರ ಕೂದಲ ಹಿಂಬದಿಗೂ ಲೈಟು ಕೊಟ್ಟು ಒಳ್ಳೆ ಚಿತ್ರನಟಿಯರ ಥರ ತೆಗೆದುಕೊಡುತ್ತಿದ್ದೆ. ಇದರಿಂದಾಗಿಯೇ ನಮ್ಮೂರಿನ ಅದೆಷ್ಟೋ ಹೆಣ್ಣುಗಳು ಜೀವನ ರೂಪಿಸಿಕೊಂಡಿದ್ದಾರೆಂಬ ಮಾತೇ ನನಗೆ ಪ್ರಶಸ್ತಿಯಾಗಿತ್ತು.

ಆದರೆ ಈಗಿನ ಕೇಸೇ ವಿಚಿತ್ರವಾದುದಾಗಿತ್ತು. ಜಾಗವನ್ನು ನೋಡಿ ಬರಲೆಂದು ನನ್ನೊಂದಿಗೆ ಇಬ್ಬರು ಪೊಲೀಸರನ್ನು ಕಳಿಸಿದರು. ಎಸ್.ಪಿ. ಆಫೀಸಿನ ಕಾಂಪೌಂಡಿಗೆ ಆತುಕೊಂಡಂತೆಯೇ ಇದ್ದ, ಸುಮಾರು ಐವತ್ತು ಎಕರೆಯಷ್ಟು ವಿಶಾಲವಾಗಿದ್ದ ಆ ಖಾಲಿ ಜಮೀನಿನ ವಿವಾದ ಎಷ್ಟೋ ವರ್ಷಗಳಿಂದ ಕೋರ್ಟ್‌ನಲ್ಲಿದ್ದುದರಿಂದ ಅನಾಯಾಸವಾಗಿ ಬಳ್ಳಾರಿ ಜಾಲಿ ಬೆಳೆದಿತ್ತು. ಸುತ್ತಲೂ ಊರು ಬೆಳೆದಿದ್ದರೂ ಈ ಜಾಗದ ವಾರಸುದಾರರು ಯಾರೆಂದೇ ತಿಳಿಯದೇ, ಅದು ಅನೇಕ ಕೊಲೆ, ದರೋಡೆಗಳಿಗೆ ಕುಪ್ರಸಿದ್ಧವಾಗಿತ್ತು.

ಆದರೆ ಈ ಬಾರಿ ಆದುದು ಮಾತ್ರ ಇಡೀ ಊರ ಜನ ದಂಗಾಗಿಹೋಗುವಂಥ ಕೊಲೆ. ಆ ಕೊಲೆ ಬರೀ ಕೊಲೆಯಾಗಿರಲಿಲ್ಲ. ಕಾಲೇಜು ಓದುತ್ತಿದ್ದ ಹುಡುಗಿಯೊಬ್ಬಳು, ಆ ಜಾಲಿಹೊಲದ ಕಾಲುದಾರಿಯಲ್ಲಿ ಹೋದರೆ ಮನೆಗೆ ಅರ್ಧ ಕಿಲೋಮೀಟರ್ ಕಡಿಮೆ ನಡೆಯಬೇಕಾಗುತ್ತದೆಂದು ಭಾವಿಸಿ ಆ ಹಾದಿ ಆಯ್ದುಕೊಂಡಿದ್ದಳು. ಬಹುಶಃ ಸಂಜೆಯಾಗಿದ್ದರೆ ಆ ದಾರಿಯಲ್ಲಿ ಆಕೆ ಹೋಗುತ್ತಿರಲಿಲ್ಲವೇನೋ! ಮಧ್ಯಾಹ್ನದ ಸುಡುಸುಡು ಬಿಸಿಲು. ಇಂಥ ಹಗಲಿನಲ್ಲಿ ಕಳ್ಳಕಾಕರ ಭಯ ಕಡಿಮೆಯೆಂದು ಆಕೆ ಧೈರ್ಯಮಾಡಿರಬೇಕು. ಅಲ್ಲದೇ ಸುರೇಶ್ ಯಾದವ್ ಜಿಲ್ಲೆಗೆ ಬಂದ ಮೇಲೆ ಇಡೀ ಊರಿಗೆ ಊರೇ ಅಪರಾಧಗಳಿಂದ ಮುಕ್ತವಾಗಿತ್ತಲ್ಲ.

ಮಧ್ಯಾಹ್ನದ ಬಿಸಿಲಿನಿಂದ ಕಂಗಾಲಾಗಿದ್ದ ಆಕೆ ಬೇಗ ಮನೆ ತಲುಪುವ ಉಮೇದಿನಲ್ಲಿದ್ದಳು. ಮೇಲಾಗಿ ಸ್ವಲ್ಪ ಗಡುಸಾದ, ಒರಟು ಸ್ವಭಾವದ, ಅಂಜಿಕೆಯ ಅಂಕೆಯೇ ಇರದಂತೆ ಬೆಳೆದ ಹೆಣ್ಣುಮಗಳು ಬೇರೆ. ಆದರೆ ಆತ ಅದು ಹೇಗೆ ಆಕೆ ಅಲ್ಲಿ ಬರುವಳೆಂದು ಊಹಿಸಿದ್ದನೋ ಗೊತ್ತಿಲ್ಲ. ಕಾಡಿನಲ್ಲಿ ತನ್ನ ಪಾಡಿಗೆ ತಾನು ಹುಲ್ಲು ಮೇಯುವ ಹುಲ್ಲೆಯ ಮೇಲೆ ಛಂಗನೆ ಎಗರಿ ಕುತ್ತಿಗೆಗೆ ಬಾಯಿ ಹಾಕಿ ರಕ್ತ ಹೀರುವ ತೋಳದಂತೆ, ಹಿಂದಿನಿಂದ ಕುತ್ತಿಗೆಯನ್ನು ಬಳಸಿ ಅನಾಮತ್ತು ಎತ್ತಿಕೊಂಡು ಅಷ್ಟು ದೂರದ ಪೆಳೆಯೊಂದರ ಮರೆಗೆ ಎಗರಿಸಿಕೊಂಡು ಹೋಗಿದ್ದ. ಅಲ್ಲಲ್ಲಿ ಬಿದ್ದಿದ್ದ ಆಕೆಯ ಚಪ್ಪಲಿಗಳು, ಕಾಲೇಜಿನ ಬ್ಯಾಗು–ಪುಸ್ತಕಗಳು, ನೆಲದಲ್ಲಿ ತೊಡರಿ ತೊಡರಿ ಎಳೆದಿದ್ದ ಎರಡೂ ಕಾಲಿನ ಹಿಮ್ಮಡಿಯ ಗೆರೆಗಳು ಆ ಸಂದರ್ಭದ ಸಾಕ್ಷಿಗೆ ಪುಷ್ಟಿ ನೀಡಿದ್ದವು. ಆ ರಭಸಕ್ಕೆ ಕೈಕಾಲ ಮೇಲೆ ಗೀಚಿದ ಜಾಲಿಮುಳ್ಳಿನ ಸರಳ ರೇಖೆಯಂಥ ರಕ್ತದ ಒಸರುಗಳು ಸತ್ಯ ನುಡಿಯುತ್ತಿದ್ದವು. ಆದರೂ ಆಕೆ ಪ್ರತಿಭಟಿಸದೇ ಏನು ಇರಲಿಲ್ಲ. ಆದರೆ ಆತನ ವೃತ್ತಿಪರ ವಿಕೃತಿಯ ಮುಂದೆ ಆಕೆ ಅಸಹಾಯಕಳಾಗಿರಲೇಬೇಕು. ನೆಲದಲ್ಲಿ ಬೀಳಿಸಿಕೊಂಡು ಅತ್ಯಾಚಾರವೆಸಗಲು ಪ್ರಯತ್ನಿಸಿದ್ದ ಕುರುಹು ಅಲ್ಲೆಲ್ಲ ಹರಡಿತ್ತು. ಆದರೆ ಆಕೆಯ ಅಸಹಕಾರಕ್ಕೆ ರೋಸಿಹೋಗಿ ಆಕೆಯ ಕುತ್ತಿಗೆಯನ್ನು ಹಿಚುಕಿ ಸಾಯಿಸಿ, ನಂತರ ಅತ್ಯಾಚಾರ ಮಾಡಿರಬಹುದು. ಅಷ್ಟಕ್ಕೇ ಸುಮ್ಮನಾಗದ ಆತನ ವಿಕೃತಿ ಆಕೆಯ ತುಂಬಿದೆದೆಯ ಎರಡೂ ಸ್ತನಗಳನ್ನು ಮಧ್ಯಕ್ಕೆ ಛೇದಿಸಿದ್ದನ್ನು ನೋಡಿದರೆ, ಅದರೊಳಗೆ ಏನಿರುತ್ತದೆಂದು ಶೋಧಿಸಲು ಹೋಗಿರಬೇಕು? ಅದುವರೆಗೂ ಇಂಥ ಅದೆಷ್ಟೋ ಕೊಲೆಗಳನ್ನು ಕಂಡಿದ್ದರೂ, ಸ್ತನಛೇದನವನ್ನು ಕಂಡ ಮೇಲಂತೂ ನನ್ನ ಮೈಯೆಲ್ಲ ಧಗಧಗ ಉರಿದುಹೋಯಿತು. ಆ ದುಷ್ಟ, ದುರುಳನನ್ನು ಈ ಕ್ಷಣವೇ ಹಿಡಿದು ಛಿದ್ರಛಿದ್ರ ಮಾಡಿಬಿಡಬೇಕು ಅನ್ನಿಸದಿರಲಿಲ್ಲ. ನನಗೇ ಅರಿವಿಲ್ಲದೇ ಕೆಳದುಟಿಯನ್ನು ಕಚ್ಚಿಹಿಡಿದಿದ್ದುದು, ಅದು ನೋವಾದುದರಿಂದ ಅರಿವಾಯಿತು...

ನಾನಾದರೋ ಕೇವಲ ಕಲಾವಿದ. ಪೊಲೀಸರೇ ಹಿಡಿಯಲಾಗದ ಅವನನ್ನು ನಾನಾದರೂ ಹೇಗೆ ಹಿಡಿಯಬಲ್ಲೆ? ನನ್ನ ಗೆರೆಗಳಿಂದಲೇ ಹಿಡಿದುಕೊಡುವಂತೆ ಎಸ್.ಪಿ. ಹೇಳಿದ್ದರು. ಆದರೆ ನನಗೆ ಅದಷ್ಟೇ ಸಮಾಧಾನ ನೀಡುವಂತಿರಲಿಲ್ಲ. ಕಂಪ್ಯೂಟರಿಗೆ ಹಾಕಿ ಕಣ್ಣು, ಕಿವಿ, ಮೂಗು, ಬಾಯಿಗಳನ್ನು ಚಿತ್ರಿಸಿ, ಯಥಾವತ್ ಅವನನ್ನೇ ಸೆರೆ ಹಿಡಿಯಲು ನನ್ನ ಮೌಸು ಹಪಾಹಪಿಸುತ್ತಿತ್ತು.